# 5

# ಯೇಸು ಜನರನ್ನು ಬಾಪ್ತಿಸ್ಮಕ್ಕೆ ನಡಿಸಿದನು

*"ಯೇಸು ಯೋಹಾನನಿಗಿಂತ ಹೆಚ್ಚು ಶಿಷ್ಯರನ್ನು ಮಾಡಿಕೊಂಡು ಅವರಿಗೆ ಬಾಪ್ತಿಸ್ಮ ಕೊಡುತ್ತಿರುವ ಸುದ್ದಿಯನ್ನು ಫರಿಸಾಯರು ಕೇಳಿದರು ... (ಆದರೂ ಬಾಪ್ತಿಸ್ಮ ಕೊಡುತ್ತಿದ್ದವನು ಯೇಸುವಲ್ಲ; ಆತನ ಶಿಷ್ಯರೇ)" (ಯೋಹಾನ 4:1, 2).*

ಯೇಸು ತನ್ನ ಸೇವೆಯನ್ನು ಪ್ರಾರಂಭಿಸಿದಾಗ, ಕಾಲವು ಪರಿಪೂರ್ಣವಾಯಿತು ಎಂದು ವಿವರಿಸಿದನು (ಇದರ ಅರ್ಥ ಮೆಸ್ಸೀಯನ ಮತ್ತು ರಾಜ್ಯದ ಪ್ರವಾದನೆಗಳನ್ನು ನೆರವೇರಿಸಲು ಸಮಯವು ಬಂದಿರುವುದು ಎಂಬುದು, ಮಾರ್ಕ 1:14, 15). "ಪರಲೋಕ ರಾಜ್ಯವು ಸಮೀಪ ವಾಯಿತು; ಮಾನಸಾಂತರ ಹೊಂದಿರಿ" ಎಂದು ಆತನು ಜನರಿಗೆ ಹೇಳಿದನು (ಮತ್ತಾಯ 3:1, 2; 4:17). ಯೋಹಾನನ ಸೇವಾ ಸಮಯದಲ್ಲಿಯೇ ಇದ್ದ ಯೇಸುವಿನ ಸೇವೆಯ ಮುಖಾಂತರ ಅನೇಕರು ವಿಧೇಯರಾಗಿ ಬಾಪ್ತಿಸ್ಮ ಹೊಂದಿದರು (ಯೋಹಾನ 3:22; 4:1).

ಯೇಸು ಯಾಕೆ ಜನರನ್ನು ಬಾಪ್ತಿಸ್ಮ ಹೊಂದುವದಕ್ಕೆ ನಡಿಸಿದನು ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿಯು ಪರಿಶುದ್ಧ ಬರಹಗಳಲ್ಲಿ ಕೊಡಲ್ಪಟ್ಟಿಲ್ಲ: ಆದರೆ ಯೋಹಾನನ ಬಾಪ್ತಿಸ್ಮದ ಬಗ್ಗೆ ಸಾಕಷ್ಟು ಮಾಹಿತಿ ಕೊಡಲ್ಪಟ್ಟಿದೆ. ಅವರ ಸೇವೆಯನ್ನು ಹೋಲಿಸು ವದರಿಂದ ಯೇಸು ಬೋಧಿಸಿದ ಬಾಪ್ತಿಸ್ಮವು ಯೋಹಾನನು ಬೋಧಿಸಿದ ಬಾಪ್ತಿಸ್ಮಕ್ಕಿಂತ ಭಿನ್ನವಾಗಿರಲಿಲ್ಲ ಎಂದು ನಂಬಲರ್ಹವಾದ ತೀರ್ಮಾನಕ್ಕೆ ಬರಬಹುದು.

## ಅದೇ ಸಂದೇಶ

ಮತ್ತಾಯ 3:2 ಮತ್ತು ಲೂಕ 3:3 ರಲ್ಲಿಯ ಸುವಾರ್ತೆಯ ವಿವರಗಳನ್ನು ಒಂದುಗೂಡಿಸುವದರಿಂದ, ಪಾಪಗಳ ಕ್ಷಮಾಪಣೆಗಾಗಿ ಮಾನಸಾಂತರದ ಬಾಪ್ತಿಸ್ಮವನ್ನು ಯೋಹಾನನು ಪ್ರಸಂಗಿಸಿದನು, ಅದಕ್ಕೆ ಪರಲೋಕ ರಾಜ್ಯವು ಸಮೀಪವಾಗಿದೆ ಎಂಬುದನ್ನು ಕೂಡಿಸಿದನು ಎಂಬ ತೀರ್ಮಾನಕ್ಕೆ ಬರಬಹುದು. ಬಾಪ್ತಿಸ್ಮ ಹೊಂದುವದರ ಮೂಲಕ ಉತ್ತರ ಕೊಟ್ಟವರು ಮಾನಸಾಂತರಪಟ್ಟರು ಹಾಗೂ ತಮ್ಮ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಿದರು.

ಯೋಹಾನನ ಸಂದೇಶಕ್ಕೆ ಉತ್ತರ ಕೊಟ್ಟವರು ಮತ್ತು ರಾಜ್ಯದ ಕುರಿತಾದ ಯೇಸುವಿನ ಸಂದೇಶಕ್ಕೆ ಉತ್ತರ ಕೊಟ್ಟವರು ಒಂದೇ ತರದ ಸಂದೇಶಕ್ಕೆ ಉತ್ತರ ಕೊಟ್ಟಿರಬೇಕು. ಯೋಹಾನನು ಮಾನಸಾಂತರವನ್ನು ಪ್ರಸಂಗಿಸಿದನು, ಹಾಗೆಯೇ ಯೇಸುವು ಮಾಡಿದರು. ಬರಲಿಕ್ಕಿದ್ದ ರಾಜ್ಯಕ್ಕಾಗಿ ಯೋಹಾನನು ಸಿದ್ಧಪಡಿಸುತ್ತಿದ್ದನು. ಯೇಸುವು ಹಾಗೆಯೇ ಮಾಡಿದರು. ಪಾಪಗಳ ಕ್ಷಮಾಪಣೆಗಾಗಿ ಮಾನಸಾಂತರದ ಬಾಪ್ತಿಸ್ಮವನ್ನು ಯೋಹಾನನು ಪ್ರಸಂಗಿಸಿದನು. ಆದರೆ ಬಾಪ್ತಿಸ್ಮ ಮತ್ತು ಕ್ಷಮಾಪಣೆಯ ಮೇಲಿನ ಯೇಸುವಿನ ಪ್ರಸಂಗವನ್ನು ಕುರಿತು ಮಾಹಿತಿ ಇರುವದಿಲ್ಲ. ಯೋಹಾನ ಮತ್ತು ಯೇಸು ಇಬ್ಬರೂ ಜನರನ್ನು ಬಾಪ್ತಿಸ್ಮಕ್ಕೆ ನಡಿಸಿದರು. ಇತರ ಎಲ್ಲಾ ವಿಷಯಗಳಲ್ಲಿ ಯೇಸು ಮತ್ತು ಯೋಹಾನ ಬೋಧಿಸಿದ್ದು ಸಮಾಂತರವಾಗಿದ್ದರೆ, ಅವರು ಒಂದೇ ಸಂದೇಶ

ವನ್ನು ಅಂದರೆ ಪರಲೋಕ ರಾಜ್ಯವು ಸಮೀಪಿಸಿದ್ದರಿಂದ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮವನ್ನು ಬೋಧಿಸಿರಬೇಕಲ್ಲವೇ?

ಪರಲೋಕ ರಾಜ್ಯ ಇಲ್ಲವೇ ದೇವರ ರಾಜ್ಯವು (ಮತ್ತಾಯ 4:17; ಮಾರ್ಕ 1:15) ಹತ್ತಿರದಲ್ಲಿದೆ ಎಂದು ಯೋಹಾನ ಮತ್ತು ಯೇಸು ಇಬ್ಬರೂ ಬೋಧಿಸಿದ ರಾಜ್ಯವು, ನೀತಿ ರಾಜ್ಯವಾಗಿತ್ತು (ರೋಮಾಪುರ 14:17). ಅದಕ್ಕೆ ಮಾನಸಾಂತರದ ಅವಶ್ಯಕತೆಯಿತ್ತು. ಅಂದರೆ ಜೀವಿತದಲ್ಲಿ ಬದಲಾವಣೆ, ಪಾಪಗಳ ಕ್ಷಮಾಪಣೆ ಹಾಗೂ ಪ್ರವೇಶಿಸುವವರಿಗೆ ನೂತನ ಜೀವನ ಅಗತ್ಯವಾಗಿತ್ತು (ಅಪೊಸ್ತಲರ ಕೃತ್ಯ 26:18; ಕೊಲೊಸ್ಸೆ 1:13). ಮಾನಸಾಂತರ ಪಟ್ಟು ಬಾಪ್ತಿಸ್ಮ ಹೊಂದುವದನ್ನು ಜನರಿಂದ ಅಪೇಕ್ಷಿಸುವದರಿಂದ ಯೋಹಾನ ಮತ್ತು ಯೇಸು ಅವರಿಗೆ ಬರಲಿಕ್ಕಿದ್ದ ರಾಜ್ಯದೊಳಗೆ ಪ್ರವೇಶ ಕೊಡುವ ನೂತನ ಜೀವನಕ್ಕಾಗಿ ಅವರನ್ನು ಸಿದ್ಧಪಡಿಸುತ್ತಿದ್ದರು (ಯೋಹಾನ 3:5). ಅವರ ಗುರಿಗಳು ಒಂದೇ ಯಾಗಿದ್ದಂತೆ ಅವರು ಸ್ವೀಕರಿಸಿದ ಪ್ರತಿಕ್ರಿಯೆಯೂ ಒಂದೇ ಯಾಗಿತ್ತು. ಅವರು ಒಂದೇ ಸಂದೇಶವನ್ನು ಪ್ರಸಂಗಿಸುತ್ತಿದ್ದರೆಂಬ ತೀರ್ಪು ಸರಿಯಾಗಿ ತೋರುತ್ತದೆ.

## ಅದೇ ಉದ್ದೇಶ

ತನ್ನ ಸಂದೇಶ ಮತ್ತು ಬಾಪ್ತಿಸ್ಮದಲ್ಲಿ ಯೋಹಾನನಿಗಿಂತ ಭಿನ್ನವಾದ ಉದ್ದೇಶವು ಯೇಸುವಿಗೆ ಇತ್ತೋ? ಜನರು ಅರಿಕೆ ಮಾಡಿದಾಗ ಈ ಸತ್ಯವನ್ನು ಆತನು ಒಪ್ಪಿಕೊಂಡರೂ ಯೇಸುವು ತಾನು ಮೆಸ್ಸೀಯನು, ದೇವರ ಕುಮಾರನು ಎಂಬುದಾಗಿ ಪ್ರಕಟಿಸುತ್ತ ಪ್ರಯಾಣ ಮಾಡುತ್ತಿರಲಿಲ್ಲ (ಮತ್ತಾಯ 16:16, 17; ಯೋಹಾನ 4:25, 26; ಲೂಕ 22:67-70), ಯಾರಿಗೂ ಹೇಳಬಾರದೆಂದು ಆತನು ತಿಳಿಸಿದ್ದನು (ಮತ್ತಾಯ 16:20). ಯೋಹಾನನ ಬಾಪ್ತಿಸ್ಮದಂತೆ ಆತನ ಬಾಪ್ತಿಸ್ಮವು ಬರಲಿಕ್ಕಿದ್ದ ಮೆಸ್ಸೀಯನಲ್ಲಿ ನಂಬಿಕೆಯ ಮೇಲೆ ಅವಲಂಭಿಸಿತ್ತು. ಆದರೆ ಯೇಸುವಿನಲ್ಲಿ ಮೆಸ್ಸೀಯನಂತೆ, ದೇವರ ಕುಮಾರನಂದೆ ಅಲ್ಲ.

ಯೋಹಾನನಿಂದ ಮತ್ತು ಯೇಸುವಿನಿಂದ ಬಾಪ್ತಿಸ್ಮ ಹೊಂದಿದವರು ಅವರ ಶಿಷ್ಯರಾದರು (ಯೋಹಾನ 4:1). ಅವರಿಂದ ಅವರು ಬೋದಿಸಲ್ಪಟ್ಟಿದ್ದರು, ಅವರ ಸಂದೇಶದ ಹಿಂಬಾಲಕರಾಗಿದ್ದರು, ಹಾಗೂ ಅವರ ಅನುಯಾಯಿಗಳಾಗಿದ್ದರು. ಮೆಸ್ಸೀ ಯನನ್ನು ಸ್ವೀಕರಿಸಲು, ಆತನ ರಾಜ್ಯದಲ್ಲಿ ಪ್ರವೇಶಿಸಲು ಅವರು ಸಿದ್ಧರಾಗಿದ್ದರು.

## ಯೇಸುವಿನ ಯಶಸ್ಸು

ಯೇಸುವಲ್ಲ, ಆದರೆ ಯೋಹಾನನು ನೀರಿನ ಬಾಪ್ತಿಸ್ಮ ಹೊಂದಲು ಜನರನ್ನು ಪ್ರೇರೇಪಿಸಿದನು, ಆದರೆ ಬಾಪ್ತಿಸ್ಮ ಹೊಂದಲು ಜನರನ್ನು ನಡಿಸಿದ್ದರಲ್ಲಿ ಯೇಸು ಬಹಳ ಯಶಸ್ಸನ್ನು ಸಾಧಿಸಿದನು ಎಂದು ಕೆಲವರು ಯೋಚಿಸುತ್ತಾರೆ. ಯೋಹಾನನಗಿಂತ ಯೇಸುವು ಹೆಚ್ಚು ಜನರನ್ನು ಶಿಷ್ಯರನ್ನಾಗಿ ಮಾಡಿಕೊಂಡು ಬಾಪ್ತಿಸ್ಮ ಕೊಡುತ್ತಿದ್ದಾನೆಂದು ವರದಿಯನ್ನು ಫರಿಸಾಯರು ಕೇಳಿದರು (ಯೋಹಾನ 4:1). ಇದು ಸತ್ಯವಾದದ್ದೋ ಇಲ್ಲವೋ, ಆದರೆ ಬಾಪ್ತಿಸ್ಮಕ್ಕಾಗಿ ಜನರ ದೊಡ್ಡ ಸಮೂಹವನ್ನು ಯೇಸುವು ನಡಿಸಿದನೆಂಬುದನ್ನು ನಾವು ತೀರ್ಮಾನಿಸಿಕೊಳ್ಳ ಬೇಕಾಗುತ್ತದೆ.

## ಯೇಸುವಿಗೆ ಬಾಪ್ತಿಸ್ಮದ ಪ್ರಾಮುಖ್ಯತೆ

ಯೇಸುವು ವೈಯಕ್ತಿಕವಾಗಿ ತಾನೇ ನೀರಿನ ಬಾಪ್ತಿಸ್ಮ ಮಾಡಿಸದೇ ಇದ್ದದ್ದು ಆತನು

ಬಾಪ್ತಿಸ್ಮದ ಮೇಲೆ ಇಟ್ಟ ಪ್ರಾಮುಖ್ಯತೆಯು ಕಡಿಮೆ ಯಾಗಲಿಲ್ಲ. ಬಾಪ್ತಿಸ್ಮ ಹೊಂದಲು ಆತನು ಅನೇಕರನ್ನು ಪ್ರೋತ್ಸಾಹಿಸಿದನು (ಯೋಹಾನ 4:1), ಜನರಿಗೆ ಯೇಸು ಬಾಪ್ತಿಸ್ಮ ಹೊಂದಲು ಒತ್ತಾಯ ಮಾಡಿದನು ಎಂಬುದಕ್ಕೆ ಇದು ಸೂಚನೆಯಾಗಿದೆ. ಹಾಗೆ ಮಾಡಲು ಯೇಸು ಪ್ರೋತ್ಸಾಹಿಸದಿದ್ದರೆ ಅವರು ಬಾಪ್ತಿಸ್ಮ ಹೊಂದಲು ಯಾಕೆ ಬರುತ್ತಿದ್ದರು?

"ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಬಾಪ್ತಿಸ್ಮ ಕೊಡುತ್ತೇನೆ, ಆದರೆ ನನ್ನ ಹಿಂದೆ ಬರುವವನು ನನಗಿಂತಲೂ ಶಕ್ತನು; ... ಆತನು ಪರಿಶುದ್ಧಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಬಾಪ್ತಿಸ್ಮ ಕೊಡುವನು" (ಮತ್ತಾಯ 3:11) ಎಂಬ ಯೋಹಾನನ ಹೇಳಿಕೆಯನ್ನು ಯೇಸುವು ನೀರಿನ ಬಾಪ್ತಿಸ್ಮಕ್ಕೆ ಮುಖ್ಯತ್ವ ಕೊಡುವದಿಲ್ಲ ಇಲ್ಲವೇ ಅದು ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ಪ್ರಾಮುಖ್ಯತೆಯಿಲ್ಲದ ಪಾತ್ರವಹಿಸುವುದು ಎಂದು ಯೋಹಾನನು ಬೋಧಿಸಿದನು ಎಂಬ ಅರ್ಥದಲ್ಲಿ ತೆಗೆದು ಕೊಂಡಿರುತ್ತಾರೆ. ನೀರಿನ ಬಾಪ್ತಿಸ್ಮಕ್ಕೆ ಮುಖ್ಯತ್ವವಿರುವದಿಲ್ಲವೆಂದು ಯೋಹಾನನು ಬೋಧಿಸಲು ಪ್ರಯತ್ನಿಸುತ್ತಿದ್ದಿಲ್ಲ. ತನ್ನ ನಂತರ ಬರುವಾತನ ಮುಖ್ಯತ್ವವನ್ನು ಒತ್ತಿ ಹೇಳಲು ಪ್ರಯತ್ನಿಸಿದನು. ಯೋಹಾನನು ಮಾಡಬಾರದಂಥದ್ದನ್ನು ಆತನು ಮಾಡಲು ಶಕ್ತನಾಗಿದ್ದನು: ಪರಿಶುದ್ಧಾತ್ಮನಿಂದ, ಬೆಂಕಿಯಿಂದ ಬಾಪ್ತಿಸ್ಮ ಮಾಡಿಸುವನು. ಯೋಹಾನನು ಸ್ತ್ರೀಯಿಂದ ಹುಟ್ಟಿದವರೊಳಗೆ ಅತೀ ದೊಡ್ಡವನಾಗಿದ್ದರೂ (ಮತ್ತಾಯ 11:11) ಆತನ ಕೆರದ ಬಾರುಗಳನ್ನು ಬಿಚ್ಚುವದಕ್ಕೂ ಯೋಗ್ಯನಾಗಿರದಿದ್ದರೆ, ಅವನ ತರುವಾಯ ಬರಲಿಕ್ಕಿದ್ದಾತನು ಅವನಿಗಿಂತಲೂ ದೊಡ್ಡವನಾಗಿರಲೇ ಬೇಕು.

ಯೇಸುವು ನೀರಿನ ಬಾಪ್ತಿಸ್ಮವು ಮುಖ್ಯವಾದದ್ದಲ್ಲವೆಂದು ಯೋಚಿಸಿದ್ದರೆ, ಆತನು ನೀರಿನ ಬಾಪ್ತಿಸ್ಮಕ್ಕೆ ಒಪ್ಪಿಸಿಕೊಡುತ್ತಿದ್ದಿಲ್ಲ. ಅದು ಪರಲೋಕದ ಆದೇಶದ ಮೇಲೆ ಅವಲಂಭಿಸಿದೆಯೆಂದು ನಂಬುತ್ತಿರಲಿಲ್ಲ (ಲೂಕ 20:1-8), ನೀರಿನ ಬಾಪ್ತಿಸ್ಮವನ್ನು ತಿರಸ್ಕರಿಸುವವರನ್ನು ದೇವರ ಮಾತನ್ನು ತಿರಸ್ಕರಿಸುವವರೆಂದು ಹೇಳುತ್ತಿರಲಿಲ್ಲ (ಲೂಕ 7:30) ಇಲ್ಲವೇ ಅನೇಕ ಜನರನ್ನು ಬಾಪ್ತಿಸ್ಮ ಹೊಂದಲಿಕ್ಕೆ ಪ್ರೇರೇಪಿಸುತ್ತಿರಲಿಲ್ಲ (ಯೋಹಾನ 4:1). ಯೋಹಾನನು ನೀರಿನಿಂದ ಬಾಪ್ತಿಸ್ಮ ಕೊಡಲು ಕಳುಹಿಸಲ್ಪಟ್ಟಿದ್ದರೆ ಮತ್ತು ಅವನಿಗಿಂತ ದೊಡ್ಡವನಾದವನು ಜನರನ್ನು ಬಾಪ್ತಿಸ್ಮ ಹೊಂದಲು ನಡಿಸಿದ್ದರೆ, ಆಗ ದೇವರು ನೀರಿನ ಬಾಪ್ತಿಸ್ಮದ ಮೇಲೆ ಪ್ರಾಮುಖ್ಯತೆಯನ್ನು ಇಟ್ಟಿರಲೇ ಬೇಕು.

## ಮಾನಸಾಂತರ ಹಾಗೂ ಧರ್ಮಶಾಸ್ತ್ರ

ಯೋಹಾನ ಮತ್ತು ಯೇಸು ಮಾನಸಾಂತರವನ್ನು ಪ್ರಸಂಗಿಸಿದ್ದು (ಮತ್ತಾಯ 3:8; 4:17) ಮಾನಸಾಂತರವು ಅವರು ಬೋಧಿಸಿದ ಬಾಪ್ತಿಸ್ಮದೊಂದಿಗೆ ಸಂಬಂಧಸಿತ್ತೆಂಬುದನ್ನು ತೋರಿಸುತ್ತದೆ. ಹೊಸ ಒಡಂಬಡಿಕೆಯು ಯೇಸುವಿನ ರಕ್ತದಿಂದ ಇನ್ನೂ ಪ್ರತಿಷ್ಠಸಲ್ಪಟ್ಟಿರಲಿಲ್ಲ (ಇಬ್ರಿಯ 9:16, 17), ಮತ್ತು ಹಳೇ ಒಡಂಬಡಿಕೆಯು ಇನ್ನೂ ಜಾರಿಯಲ್ಲಿತ್ತು. ಆದುದರಿಂದ, ಮಾನಸಾಂತರ ಅಂದರೆ ಯೋಹಾನನಿಂದ ಮತ್ತು ಯೇಸುವಿನಿಂದ ಪರಿವರ್ತನೆ ಹೊಂದಿದವರು ಅವರ ಒಡಂಬಡಿಕೆಯ ಅಧೀನತೆಯಲ್ಲಿ ಸೀನಾಯಿ ಪರ್ವತದ ಮೇಲೆ ಮೋಶೆಗೆ ಕೊಟ್ಟ ಹಳೇ ಒಡಂಬಡಿಕೆಯ ಅಧೀನತೆಯಲ್ಲಿ ಹೆಚ್ಚು ಆಸಕ್ತಿಯಿಂದ ಜೀವಿಸಲು ನಿರೀಕ್ಷಿಸಲ್ಪಟ್ಟಿದ್ದರು. ಆ ಸಮಯದಲ್ಲಿ ದೇವರ ಧರ್ಮ ಶಾಸ್ತ್ರವೊಂದೆ ಕಾರ್ಯಾಚಾರಣೆಯಲ್ಲಿತ್ತು. ಹೊಸ ಒಡಂಬಡಿಕೆಯು ಇನ್ನೂ ಜಾರಿಯಲ್ಲಿರದ ಕಾರಣದಿಂದ, ಮಾನಸಾಂತರವೆಂದರೆ ಹೊಸ ಒಡಂಬಡಿಕೆಯ ನಿಯಮಗಳಿಂದ ಒಬ್ಬನು ಹೆಚ್ಚು ಜಾಗರೂಗತೆಯಿಂದ ಜೀವಿತವನ್ನು

ಬದಲಾಯಿಸಿಕೊಂಡು ಜೀವಿಸುವುದೆಂದು ಅರ್ಥವಲ್ಲ (ಇಬ್ರಿಯ 9:16, 17).

ಯೇಸು ತನ್ನ ವೈಯಕ್ತಿಕ ಸೇವೆಯಲ್ಲಿ ಯೆಹೂದ್ಯರು ಧರ್ಮಶಾಸ್ತ್ರವನ್ನು ಕೈ ಕೊಳ್ಳಬೇಕೆಂದು ಉಪದೇಶಿಸಿದನು. ಐಶ್ವರ್ಯವಂತ ಯುವಕನಿಗೆ ದಶಾಜ್ಞೆಗಳಿಗೆ ವಿಧೇಯನಾಗಬೇಕೆಂದು ಹೇಳಿದನು (ಮತ್ತಾಯ 19:17) ಮತ್ತು ಶುದ್ಧೀಕರಿಸಲ್ಪಟ್ಟ ಕುಷ್ಠರೋಗಿಗಳಿಗೆ ಅವರು ತಮ್ಮನ್ನು ಯಾಜಕರಿಗೆ ತೋರಿಸಿಕೊಂಡು ಮೋಶೆಯು ಆಜ್ಞಾಪಿಸಿದ ಅರ್ಪಣೆಗಳನ್ನು ಸಮರ್ಪಿಸ ಬೇಕೆಂದು ಹೇಳಿದನು (ಮತ್ತಾಯ 8:4). ಯೋಹಾನ ಮತ್ತು ಯೇಸು ಇಬ್ಬರೂ ಹಳೇ ಒಡಂಬಡಿಕೆಯನ್ನು ಗಂಭೀರವಾಗಿ ಆಚರಿಸಲು ಹಿಂದಿರುಗಲು ಯೆಹೂದ್ಯರಿಗೆ ಹೇಳುವದನ್ನು ಕುರಿತು ಮಾತನಾಡಿದರು. ಅವರಿಂದ ಮಾರ್ಪಾಟು ಹೊಂದಿದವರು ಪಾಪಗಳ ಕ್ಷಮಾಪಣೆಗಾಗಿ ಪ್ರಥಮ ಒಡಂಬಡಿಕೆಯಲ್ಲಿ ಮೋಶೆಯಿಂದ ಆಜ್ಞಾಪಿಸಿದಂತೆ ಸಾಂಕೇತಿಕ ಯಜ್ಞಗಳನ್ನು ಇನ್ನೂ ಅರ್ಪಿಸುವ ಅವಶ್ಯಕತೆಯಿತ್ತು (ಯಾಜಕಕಾಂಡ 4:31). ಪಾಪಗಳನ್ನು ಕ್ಷಮಿಸಲಾಗದ ಅಂಥ ಯಜ್ಞಗಳು (ಇಬ್ರಿಯ 10:1-4), ಯೇಸುವಿನ ಮರಣದ ಮುಖಾಂತರ ಬದಲಾಯಿಸಿ, ಎರಡನೇಯ ಒಡಂಬಡಿಕೆಯಿಂದ ತೆಗೆದು ಹಾಕಲ್ಪಟ್ಟವು (ಇಬ್ರಿಯ 10:9). ಪ್ರಥಮ ಒಡಂಬಡಿಕೆಯ ಅಧೀನತೆಯಲ್ಲಿ ಇರುವವರಿಗಾಗಿ ಕ್ಷಮಾಪಣೆಯು ಶಿಲುಬೆಯ ಮೇಲೆ ಯೇಸುವಿನ ಮರಣದಿಂದ ಸಾಧ್ಯಮಾಡಲ್ಪಟ್ಟಿತು (ಇಬ್ರಿಯ 9:15; ಗಲಾತ್ಯ 4:5).

ಯೋಹಾನ ಮತ್ತು ಯೇಸು ಬೋಧಿಸಿದ ಬಾಪ್ತಿಸ್ಮವು ಹಾಗೂ ಧರ್ಮಶಾಸ್ತ್ರದ ಯಜ್ಞಗಳು, ಪಾಪಗಳ ಕ್ಷಮಾಪಣೆಗಾಗಿ ಯೇಸುವಿನ ರಕ್ತದ ಮೇಲೆ ಆಶ್ರಿತವಾಗಿತ್ತು. ಪ್ರಾಣಿಗಳ ಯಜ್ಞಗಳನ್ನು ಅರ್ಪಿಸಿದವರು ಕ್ಷಮಿಸಲ್ಪಟ್ಟರು (ಯಾಜಕ ಕಾಂಡ 4:20, 26, 31, 35; 5:10, 13, 16, 18; 6:7; 19:22; ಅರಣ್ಯಕಾಂಡ 14:19; 15:22-28; ಕೀರ್ತನೆ 78:38; 32:5; 85:2; 2 ಸಮೂವೇಲ 12:13), ಯೋಹಾನನ ಮತ್ತು ಯೇಸುವಿನ ಬಾಪ್ತಿಸ್ಮ ಹೊಂದಿದವರು ಕ್ಷಮಿಸಲ್ಪಟ್ಟರು (ಮಾರ್ಕ 1:4; ಲೂಕ 3:3). ಹೀಗಿದ್ದರೂ ಅಂಥ ಕ್ಷಮಾಪಣೆಯು ಇನ್ನೂ ಬರದೆ ಇದ್ದ ರಾಜ್ಯದಲ್ಲಿ ಅವರಿಗೆ ಪ್ರವೇಶ ಕೊಡದ್ದಾಗಿತ್ತು (ಮತ್ತಾಯ 4:17; 10:7).

ಪಂಚಾಶತ್ತಮ ದಿನದಂದು ಭಕ್ತಿಯುಳ್ಳ ಯೆಹೂದ್ಯರಿಗೆ ಪೇತ್ರನು (ಅಪೊಸ್ತಲರ ಕೃತ್ಯ 2:5) ಅವರಲ್ಲಿ ಪ್ರತಿಯೊಬ್ಬನು ಮಾನಸಾಂತರಪಟ್ಟು ಪಾಪಗಳ ಕ್ಷಮಾಪಣೆಗಾಗಿ ಯೇಸು ಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮ ಹೊಂದ ಬೇಕೆಂದು ಬೋಧಿ ಸಿದನು (ಅಪೊಸ್ತಲರ ಕೃತ್ಯ 2:38).

ದೊಡ್ಡ ಸಂಖ್ಯೆಯಲ್ಲಿ ಜನರಿಗೆ ಬಾಪ್ತಿಸ್ಮ ಕೊಡುವಲ್ಲಿ ಯೋಹಾನನು ಬಹಳ ಯಶಸ್ಸು ಹೊಂದಿದನು (ಮತ್ತಾಯ 3:5) ಹಾಗೂ ಯೇಸುವು ಸಹ ಹೆಚ್ಚು ಯಶಸ್ವಿಯಾದನು (ಯೋಹಾನ 4:1). ಪ್ರತಿಯೊಬ್ಬರೂ ಮಾನಸಾಂತರಪಟ್ಟು ಬಾಪ್ತಿಸ್ಮ ಹೊಂದಬೇಕು ಎಂದು ಪೇತ್ರನು ಹೇಳಿದ್ದನ್ನು ಕೇಳಲಿಕ್ಕೆ ಇವರು ಹಾಜರಿದ್ದಿರಬೇಕು. ಆ ದಿವಸ ಬಾಪ್ತಿಸ್ಮ ಹೊಂದಿದ ಮೂರು ಸಾವಿರ ಜನರಲ್ಲಿ ಈ ಮಹಾ ಘಟನೆಗಾಗಿ ಯೋಹಾನ ಮತ್ತು ಯೇಸು ಸಿದ್ಧಪಡಿಸಿದ್ದವರಲ್ಲಿ ಅನೇಕರು ಒಳಗೊಂಡಿದ್ದಿರಬಹುದು. ಇಲ್ಲದಿದ್ದರೆ ಬರಲಿಕ್ಕಿದ್ದ ರಾಜ್ಯಕ್ಕಾಗಿ ಸಿದ್ಧರಾದ ಜನರಾಗಲೀ, ಪೇತ್ರನು ಹಾಗೂ ಅಪೊಸ್ತಲರು ಮಾತಾಡುತ್ತಿದ್ದ ಪ್ರತಿಯೊಬ್ಬರಾಗಲೀ, ಅವರು ಹಾಗೆ ಮಾಡಿದರೆಂದು ಪೇತ್ರನು ಹೇಳಿದಾಗ್ಯೂ, ಮಾನಸಾಂತರಪಡುವ ಮತ್ತು ಬಾಪ್ತಿಸ್ಮ ಹೊಂದುವ ಅಗತ್ಯತೆಯಿರಲಿಲ್ಲ.

ರಾಜ್ಯದಲ್ಲಿರುವವರು ಹೊಸ ಒಡಂಬಡಿಕೆಯ ಬಾಪ್ತಿಸ್ಮದೊಂದಿಗೆ ಬಾಪ್ತಿಸ್ಮ ಹೊಂದಿದ ವರಾಗಿರುವರು, ಯೋಹಾನ ಮತ್ತು ಯೇಸುವಿನ ಪ್ರಸಂಗಿಸುವಿಕೆ ಸಮಯದಲ್ಲಿ ಅದು

ರೂಢಿಯಲ್ಲಿರಲಿಲ್ಲ. ಆದುದರಿಂದ ಸಿದ್ಧತೆಯ ಬಾಪ್ತಿಸ್ಮದೊಂದಿಗೆ ಬಾಪ್ತಿಸ್ಮ ಹೊಂದಿದವರು ತಮಗೆ ರಾಜ್ಯದಲ್ಲಿ ಜನ್ಮಕೊಡುವ ಇನ್ನೊಂದು ಬಾಪ್ತಿಸ್ಮವನ್ನು ನಿರೀಕ್ಷಿಸುವರು.

## ಮುಕ್ತಾಯ

ನೀರಿನ ಬಾಪ್ತಿಸ್ಮವು ಎಲ್ಲವೂ ಆಗಿರದೇ ಇದ್ದುದರಿಂದ, ಯೋಹಾನ ಮತ್ತು ಯೇಸುವಿನ ಶಿಷ್ಯರಾಗುತ್ತಿರುವವರಿಗೆ ಅದು ಮುಖ್ಯವಾದ ಅಗತ್ಯತೆಯಾಗಿತ್ತು. ಬಾಪ್ತಿಸ್ಮ ಮಾಡಿಸಿಕೊಳ್ಳದೇ ಹೋದವರು ತಾವು ಮಾನಸಾಂತರ ಹೊಂದುತ್ತಿಲ್ಲ ಮತ್ತು ಯೋಹಾನನೂ ಯೇಸುವೂ ಪ್ರಸಂಗಿಸುತ್ತಿರುವ ಸಂದೇಶವನ್ನು ನಂಬುತ್ತಿರುವದಿಲ್ಲವೆಂದು ತೋರಿಸಿದರು. ಆದುದರಿಂದ, ಅವರೇ ದೇವರ ಉಪದೇಶವನ್ನು ತಿರಸ್ಕರಿಸಿದರು (ಲೂಕ 7:30). ಈ ಕಾರಣದಿಂದ ಬರಲಿಕ್ಕಿದ್ದ ಮೆಸ್ಸೀಯನನ್ನೂ ಆತನ ವಾಕ್ಯವನ್ನೂ ಸ್ವೀಕರಿಸಲು ಅವರು ಸಿದ್ಧರಾಗಿರಲಿಲ್ಲ. ಇನ್ನೊಂದು ಕಡೆಯಲ್ಲಿ, ಈ ಬಾಪ್ತಿಸ್ಮವನ್ನು ಸ್ವೀಕರಿಸಿದವರು, ಯೇಸುವು ಪ್ರಸಂಗಿಸಲ್ಪಟ್ಟಾಗ ಆತನನ್ನು ಕರ್ತನೆಂದೂ ಕ್ರಿಸ್ತನೆಂದೂ ನಂಬಲು ಹಾಗೂ ಆತನ ರಾಜ್ಯದಲ್ಲಿ ಜನ್ಮಿಸಲು ಸಿದ್ಧರಾಗಿದ್ದರು.

ಪರಲೋಕ ರಾಜ್ಯವು ಸಮೀಪವಾಗಿದ್ದುದರಿಂದ ಪಾಪದ ಕ್ಷಮಾಪಣೆಗಾಗಿ ಮಾನಸಾಂತರದ ಬಾಪ್ತಿಸ್ಮವನ್ನು ಯೋಹಾನ, ಯೇಸು ಇಬ್ಬರೂ ಪ್ರಸಂಗಿಸುತ್ತಿದ್ದಂತೆ ತೋರುತ್ತದೆ (ಮತ್ತಾಯ 3:2; 4:17). ಯೇಸು ಬೋಧಿಸಿದ ಬಾಪ್ತಿಸ್ಮಕ್ಕೆ ಯೋಹಾನನು ಪ್ರಸಂಗಿಸಿದ ಬಾಪ್ತಿಸ್ಮಕ್ಕಿರುವ ಮುಖ್ಯತ್ವವೂ ಉದ್ದೇಶವೂ ಇತ್ತು.

© 2009 Truth for Today